## ಆಭರಣ ಹಾವು

ಟ್ರಿಂಕೆಟ್ ವಿಷಕಾರಿಯಲ್ಲದ ಹಾವು. ಕೊಲುಬ್ರಿಡೇ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಕೊಯಿಲೋಗ್ನ್ಯಾಥಸ್ ಹೆಲೆನಸ್ ಎಂದಿದೆ. ಇದಕ್ಕೆ ಆಭರಣ ಹಾವು ಎಂದು ಕನ್ನಡದಲ್ಲಿ ಕರೆಯುವರು.

ಈ ಹಾವು ಭಾರತ, ಪಾಕಿಸ್ತಾನ, ಶ್ರೀಲಂಕ, ಬಂಗ್ಲಾ ದೇಶದಲ್ಲಿ ಕಂಡುಬರುತ್ತದೆ. ಇದು ದಂಶಕಗಳು, ಸಣ್ಣ ಸಸ್ತನಿಗಳು ಮತ್ತು ಸರೀಸೃಪಗಳನ್ನು ಸೇವಿಸುತ್ತದೆ. ಗಂಡು ಹೆಣ್ಣಿಗಿಂತ ಹೆಚ್ಚು ಆಕ್ರಮಣಕಾರಿಯಾಗಿರುತ್ತದೆ. ತೆಳುವಾದ, ಸಾಧಾರಣ ಗಾತ್ರದ, ನುಣುಪಾದ ಹೊಳೆಯುವ ಹುರುಪೆಗಳಿಂದ ಇದನ್ನು ಗುರುತಿಸಬಹುದು. ಮೊದಲರ್ಧ ದೇಹದ ಮೇಲೆ ಚಾಕಲೇಟ ಕಂದು ಬಣ್ಣವಿರುವ ಹಿನ್ನೆಲೆಯ ಕಪ್ಪು– ಬಿಳಿ ಬಾಕ್ಸ್‌ಗಳ ಅಡ್ಡ ಪಟ್ಟಿಗಳಿವೆ. ಹಿಂಭಾಗದ ದೇಹವು ಕಂದು ಬಣ್ಣದ್ದಾಗಿದ್ದೂ, ಎರಡು ಕಪ್ಪು ಪಟ್ಟಿಗಳು ಬಾಲದ ತನಕ ಸಾಗುತ್ತವೆ.

—ಪ್ರಕಾಶ ಎಸ್. ಮನ್ನಂಗಿ



## ಪರಿಸರ ಸ್ನೇಹಿ ಮೂತ್ರಾಲಯ



ನಗರಗಳಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಹಣ ಪಾವತಿಸಿ ಉಪಯೋಗಿಸಬೇಕಾದ ಶೌಚಾಲಯಗಳು ಇರುತ್ತವೆ. ಇಲ್ಲಿ ಮೂತ್ರ ವಿಸರ್ಜಿಸಲು ಯಾವುದೇ ಶುಲ್ಕ ಪಾವತಿಸಬೇಕಾಗಿಲ್ಲ. ಉಚಿತ ಮೂತ್ರಾಲಯಗಳೂ ಸಹ ಅಲ್ಲಲ್ಲಿ ಕಂಡು ಬರುತ್ತವೆ.

ಹಲವಾರು ಯೂರೋಪ್ ರಾಷ್ಟ್ರಗಳಲ್ಲಿ ಹಣ ಪಾವತಿಸಿಯೇ ಮೂತ್ರಾಲಯವನ್ನು ಉಪಯೋಗಿಸಬೇಕು. ಮೂತ್ರಾಲಯ ಎಲ್ಲಿದೆ ಎಂಬ ಮಾಹಿತಿ ಪ್ರವಾಸಿಗರಿಗೆ ಇರುವುದಿಲ್ಲ ಆದ್ದರಿಂದ ಕೆಲವು ಪ್ರವಾಸಿಗರು ಎಲ್ಲೆಂದರಲ್ಲಿ ಮೂತ್ರ ವಿಸರ್ಜಿಸುತ್ತಾರೆ. ಇದರಿಂದ ನಗರದ ಸ್ವಚ್ಛತೆ ಹಾಳಾಗುತ್ತದೆ. ಇದನ್ನು ತಡೆಗಟ್ಟುವ ಸಲುವಾಗಿ ನೆದರ್ಲೆಂಡ್ಸ್‌ನ ಆಮ್‌ಸ್ಟರ್ ಡ್ಯಾಂ ನಲ್ಲಿ 'ಗ್ರೀನ್ ಪೀ' ಎಂಬ ಸಂಸ್ಥೆ ವಿನೂತನ ಯೋಜನೆ ರೂಪಿಸಿದೆ. ಯೋಜನೆಯ ಪ್ರಕಾರ ಹಲವು ಕಡೆ ತೆರೆದ ಮೂತ್ರಾಲಯಗಳನ್ನು ಇಡಲಾಗಿದೆ. ನಗರದ ಪ್ರಮುಖ ಸ್ಥಳಗಳಲ್ಲಿ ಅಲ್ಲಲ್ಲಿ ಇಡಲಾಗಿರುವ ಹೂಕುಂಡಗಳು, ಸಸ್ಯ ಕುಂಡಗಳ ಮುಂಭಾಗವನ್ನು ಮೂತ್ರವಿಸರ್ಜಿಸಲು ಅನುಕೂಲವಾಗುವಂತೆ ರೂಪಿಸಲಾಗಿದ್ದು, ವಿಸರ್ಜಿಸಿದ ಮೂತ್ರ ತಳಭಾಗದಲ್ಲಿರುವ ಟ್ಯಾಂಕ್ ನಲ್ಲಿ ಸಂಗ್ರಹವಾಗುತ್ತದೆ. ಹೀಗೆ ಸಂಗ್ರಹವಾದ ಮೂತ್ರವನ್ನು ಬಳಸಿ ರಸಗೊಬ್ಬರಕ್ಕೆ ಬೇಕಾಗುವ 'ಫಾಸ್ಪೇಟ್' ಪಡೆಯಲಾಗುತ್ತದಂತೆ.

ಹೂಕುಂಡಗಳು ಹಾಗೂ ಸಸ್ಯಕುಂಡಗಳು ನಗರದ ಸೌಂದರ್ಯವನ್ನು ಹೆಚ್ಚಿಸುವುದರೊಂದಿಗೆ, ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರ ವಿಸರ್ಜನೆಯಿಂದ ಆಗಬಹುದಾದ ತೊಂದರೆಯನ್ನೂ ತಪ್ಪಿಸಿದಂತಾಗುತ್ತದೆ.

—ಕೆ. ಶ್ರೀಧರ, ಚಿಂತಾಮಣಿ

## ಕಾಫಿಯ ಅಲೆಗಳು

ಬದುಕಲು ಎರಡು ಆಯ್ಕೆ. ಮೊದಲನೆಯದು ಪ್ರವಾಹದ ವಿರುದ್ಧ ಈಜಿ ಜೈಸುವುದು. ಪ್ರವಾಹದ ಜೊತೆಯಲ್ಲೇ ತೇಲಿ ಯಾವುದಾದರೂ ದಡ ಸೇರುವುದು ಇನ್ನೊಂದು ರೀತಿ. ಕೊರೊನಾದಿಂದ ಎಲ್ಲ ವ್ಯವಹಾರಗಳೂ ನೆಲ ಕಚ್ಚಿರುವ ಸಂದರ್ಭದಲ್ಲಿ ಬೆಂಗಳೂರಿನ ಜಯನಗರದಲ್ಲಿ ಮೂರನೇ ಅಲೆ ತಲೆ ಎತ್ತಿದೆ.

ಪ್ರಸ್ತುತ ಚಾಲ್ತಿಯಲ್ಲಿರುವ ಕೊರೊನಾ ಮೂರನೇ ಅಲೆಯ ಪ್ರಚಾರವನ್ನು ಬಳಸಿಕೊಂಡು ಹೋಟೆಲ್ ಒಂದರನ್ನು ಆರಂಭಿಸಿದ್ದಾರೆ. ಅದರ ಹೆಸರು 'ಕಾಫಿಯ ಮೂರನೇ ಅಲೆ' ಎಂದು ಇಟ್ಟಿದ್ದಾರೆ. ಕಾಫಿಯಿಲ್ಲದ ಬದುಕು ಊಹಿಸಲೂ ಅಸಾಧ್ಯ ಎನ್ನುವ ಮಟ್ಟಿಗೆ ಚಟದಂತೆ ಅದು ಅಂಟಿಕೊಂಡಿದೆ. ಮುಂದೊಂದು ದಿನ ಕೊರೊನಾ ಕರಗಿದ ನಂತರ ಜನರು ಸಮುದ್ರದ ತೆರೆಗಳಂತೆ ಈ 'ಕಾಫಿಯ ಮೂರನೇ ಅಲೆ'ಯೆಡೆಗೆ ಅಪ್ಪಳಿಸುವ ದಿನ ಬರಬಹುದು.

—ವಾ. ಮುರಳೀಧರ, ತೀರ್ಥಹಳ್ಳಿ

